ಮೈದಾನ ಆಟಗಾರರಿಗೆ ಮೊದಲಿದ್ದ ರೀತಿಯಲ್ಲಿಯೇ ಒದಗಿಸಿ ಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ದಿನಾಂಕ 25-2-1996ರವರೆಗೆ ರೂ. 39.30 ಲಕ್ಷ ಪ್ರದರ್ಶನಕ್ಕಾಗಿ ಖರ್ಚಾಗಿದೆ ಮತ್ತು ರೂ. 16.31 ಲಕ್ಷ ಮಳಿಗೆಗಳಿಂದ ಸಂಗ್ರಹವಾಗಿದೆ.

ಪ್ರದರ್ಶನ ಮುಕ್ತಾಯವಾದ ತಕ್ಷಣ ಮೈದಾನವನ್ನು ಮೊದಲಿನ ಸ್ಥಿತಿಗೆ ತರಲು ಕ್ರಮಕೈಗೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಸ್ಮಶಾನ ಪ್ರದೇಶಗಳು ಸಂಖ್ಯೆ

484 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಇರುವ ಸ್ಮಶಾನ ಪ್ರದೇಶಗಳ ಒಟ್ಟು ಸಂಖ್ಯೆ ಎಷ್ಟು? (ಅವುಗಳ ವಿವರ ಒದಗಿಸುವುದು)

ಆ) ಇವುಗಳ ಸುಧಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಮಹಾನಗರದ ಹೆಚ್ಚಳವಾದ ಜನಸಂಖ್ಯೆಗೆ ಅನುಗುಣವಾಗಿ ಇನ್ನೂ ಹೆಚ್ಚಿನ ಸ್ಮಶಾನ ಪ್ರದೇಶಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) 26.

ವಿವರಗಳು : ಮಹಾನಗರ ಪಾಲಿಕೆಗೆ ಸೇರಿದ್ದು

1)	ವಿದ್ಯಾನಗರ	7)	ಅಮರ್ ಗೋಳ
2)	ಉಣಕಲ್	8)	ಬೆಂಗೇರಿ ಮತ್ತು ಗೋಪನ್ ಕೊಪ್ಪ
3)	ಮಂಟೂರ್ ರೋಡ್	9)	ಗಬ್ಬೂರ್
4)	ನಾರಾಯಣಪುರ	10)	ಉಣಕಲ್
5)	ಕೃಷ್ಣಾಪುರ	11)	ಮೈಲಾಲ್ ಲಿಂಗನಗುಡ್ಡ
6)	ನಾಗಶೆಟ್ಟಿ	12)	ಮೃತ್ಯುಂಜಯನಗರ

ಖಾಸಗಿಯವರಿಗೆ ಸೇರಿದ್ದು

1) ದಯಾನಂದ ಕಾಲೋನಿ ನಾಗಶೆಟ್ಟಿ ಕೊಪ್ಪ
2) ಮಿಷನ್ ಕಾಂಪೌಂಡ್
3) ಕಲಬುರ್ಗಿ ಮಠ್
4) ಸೆಟಲಮೆಂಟ್, ಕ್ರಿಸ್ಚಿಯನ್ ಕಾಲೋನಿ
5) ತೊರವಿಹಕ್ಕಲ್
6) ಮೈಲಾರು ಲಿಂಗದ ಗುಡ್ಡ
7) ಕೆ.ಯು.ಡಿ. ಹತ್ತಿರ
8) ಬೆಳಗಾಂ ರೋಡ್ (ಹಿಂದೂ)
9) ಯಾದವಾಡ್ ರೋಡ್
10) ಕಮಲಾಪುರ ರಸ್ತೆ
12) ಕಲಘಟಗಿ ರಸ್ತೆ
13) ಮಹಿಷಿ ರಸ್ತೆ
14) ಕಲಗೇರಿ ರಸ್ತೆ

ಅ) ನಗರಪಾಲಿಕೆಗೆ ಸೇರಿದ್ದ 12 ಸ್ಮಶಾನಗಳ ಪೈಕಿ ಕೃಷ್ಣಾಪುರ ಸ್ಮಶಾನದಲ್ಲಿ ವಿದ್ಯುತ್ ಚಿತಾಗಾರ ಹಾಗೂ ಶೆಲ್ಟರ್ ಶೆಡ್ಡನ್ನು ಮಾಡಲಾಗಿದೆ. ಹಾಗೂ ನೀರು ಸರಬರಾಜು ಮತ್ತು ಸ್ಮಶಾನಗಳಿಗೆ ತಂತಿಬೇಲಿ ಹಾಕುವ ಕಾರ್ಯ ಮುಗಿದಿದೆ. ಅಲ್ಲದೆ, ಮೂರು ಸ್ಮಶಾನಗಳಲ್ಲಿ ಕಾವಲುಗಾರರನ್ನು ನಿಲ್ಲಿಸಲಾಗಿದೆ.

ಆ) ಬಂದಿದೆ.

ಜನಸಂಖ್ಯೆ ಹೆಚ್ಚಳದಿಂದಾಗಿ ಬೇಡಿಕೆಯ ಅನುಗುಣವಾಗಿ ಮೂರು ಪ್ರದೇಶಗಳನ್ನು ಸ್ಮಶಾನ ಪ್ರದೇಶಗಳನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

1) ಬ್ರಹ್ಮಾಪುರ (2) ಉಣಕಲ್ (3) ಗೋಕುಲ

ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಲಾಲಬಾಗ್ ಮತ್ತು ಮಕ್ಕಳ ವನ ನಿರ್ಮಾಣ.

485 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ -ಧಾರವಾಡ ಮಹಾನಗರದಲ್ಲಿ ಲಾಲ್‌ಬಾಗ್ ಮತ್ತು ಮಕ್ಕಳ ವನ ನಿರ್ಮಿಸುವ ವಿಷಯ ಸರ್ಕಾರದವರ ಮಂದಿದೆಯೇ?

ಆ) ಹಾಗಿದ್ದಲ್ಲಿ ಲಭ್ಯವಿರುವ ಸ್ಥಳವನ್ನು ಗುರುತಿಸಲಾಗಿದೆಯೆ? ಹಾಗಿದ್ದಲ್ಲಿ ಎಂದಿನಿಂದ ನಿರ್ಮಾಣ ಕೆಲಸ ಪ್ರಾರಂಭವಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.